

ಬೆಂಗಳೂರು ಕೋಟೆ ಹೈಸ್ಕೂಲ್ ಮೈದಾನದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವದಲ್ಲಿ ದ.ರಾ. ಬೇಂದ್ರೆಯವರಿಗೆ ಗೌರವಾರ್ಪಣೆ ಸಲ್ಲಿಸುತ್ತಿರುವ ಅಂದಿನ ಕಸಾಪ ಅಧ್ಯಕ್ಷ ಜಿ. ನಾರಾಯಣ.

## ಬೆಳಕಿನ ಗಂಧ

ಕನ್ನಡಿಗರೆಲ್ಲರೂ ಒಂದಾದ ಸಂಭ್ರಮವನ್ನು ಕವಿಯು ನಾಡಿಗೆ ಉಂಟಾದ ಸೂರ್ಯೋದಯ 'ಬೆಳಕಿನ ಗಂಧ' ಎಂದು ಬಣ್ಣಿಸಿದ್ದಾರೆ. ಅದು 'ತಾಯಿ–ನುಡಿ'ಯಾಗಿ ಕನ್ನಡಿಗರನ್ನೆಲ್ಲ ಎಚ್ಚರಗೊಳಿಸುವ ಗೀತವಾಗಿದೆ.

ತಾಯಿನುಡಿದಳು ಕೇಳಿರೋ –
ತಾಯಿ ನುಡಿದಳು ಏಳಿರಿ ||ಪಲ್ಲವಿ||

ಕನ್ನಡಿಗರು ಹೈದರಾಬಾದ್, ಬಾಂಬೆ, ಮದ್ರಾಸ್ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಕಾಲವನ್ನು ಕತ್ತಲೆ ಎಂದು ಕರೆದಿದ್ದಾರೆ. ನಾಡಿಗೆ ಆವರಿಸಿದ್ದ ಗಾಢಾಂಧಕಾರದ ಒಡಲಿನಿಂದಲೇ ಕನ್ನಡಿಗರ ಐಕ್ಯತೆಯ ಉದಯವಾಗಿದೆ. ಕತ್ತಲೆಯ ಹೂಗೆಂಪು ಒಡೆದು ಹೋಗಿ 'ಬೆಳಕಿನ ಗಂಧ' ಪಸರಿಸಿದೆ ಎಂದು ಆನಂದಾನುಭವವನ್ನು ಆಘ್ರಾಣಿಸಿದ್ದಾರೆ. ಕನ್ನಡ ನಾಡಿನ ಮಕ್ಕಳೆಲ್ಲ ಅದನ್ನು ಉಸಿರಿಸುವ– ಮಾತಾಡಿ ನಲಿಯುವ ಸಂತೋಷಕ್ಕೆ ಸಮಾನವಾದದು ಯಾವುದಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಕತ್ತಲೆಯ ಹೂಗೆಂಪು ಒಡೆಯಿತು
ಏನು ಬೆಳಕಿನ ಗಂಧವೋ!
ಮೂಗು ಉಳ್ಳಾ ಮಗುಗಳೆಲ್ಲಾ
ಉಸಿರಿರುವುದೇ ನಂದವೋ!

ಬೇಂದ್ರೆಯವರು ಕನ್ನಡವನ್ನು ಗೆಳೆಯರ ಕನ್ನಡ ಎಂದು ನೇಹವು ಭಾಷೆಯಲ್ಲಿ ಒಂದಾಗಿಸಿರುವುದನ್ನು ಹೇಳುತ್ತ, ಅದು ಕನ್ನಡಿಗರ 'ಜೀವಾಳದ ಉಸಿರು' ಎಂದು ಸ್ಪಷ್ಟಪಡಿಸಿದ್ದಾರೆ. ಅದನ್ನು ರಸನೇತ್ರದಿಂದ ನೋಡು ಎಂದು ಕರೆಕೊಟ್ಟಿದ್ದಾರೆ.

ಗೆಳೆಗೆಳೆಯರ ಕನ್ನಡವಿದು
ಕನ್ನಡಿಗರ ನಾಡು,
ಜೀವಾಳದ ಉಸಿರೆತ್ತುತ ರಸನೇತ್ರದಿ ನೋಡು.

ಕನ್ನಡವಿದೆ ಕನ್ನಡಿಯಿದೆ
ಕಣ್ಣಿದ್ದರೆ ನೋಡಿ, (ಸೂರ್ಯಪಾನ)

## ಮೈತ್ರಿಯೇ ಮೈಮುರಿದು ಎದ್ದಿದೆ

ಕನ್ನಡಿಗರೆಲ್ಲ ಒಂದಾಗಿ ತಮ್ಮ ನುಡಿಯಲ್ಲಿ ಸಂವಾದಿಸುತ್ತ ಸ್ನೇಹ ಸಹೋದರತ್ವದ ಆನಂದವನ್ನು ಅನುಭವಿಸುವುದನ್ನು ರೂಪಕವಾಗಿ 'ಮೈತ್ರಿಯೇ ಮೈಮುರಿದು ಎದ್ದಿದೆ' ಎಂದು ವರ್ಣಿಸಿದ್ದಾರೆ. ಇದನ್ನು ಪ್ರತ್ಯೇಕತೆಯ ನಿದ್ದೆಯಿಂದೆದ್ದ ಎಚ್ಚರ ಎಂದು ಕರೆದಿದ್ದಾರೆ. ಹಿಂದೆ ನಡೆದು ಹೋದ ಘಟನೆಗಳ ಮತ್ಸರ ಬೇಡ ಎಂದಿದ್ದಾರೆ.

ಹಲವು ವರ್ಷಗಳ ನಂತರ 'ವಿಶಾಲ ಮೈಸೂರು' ಆಗಿ ಕನ್ನಡ ರಾಜ್ಯ 1956ರ ನವೆಂಬರ್ 1ರಂದು ಉದಯವಾಯಿತು. ಅದು ಈಶ್ವರೇಚ್ಛೆಯ ಉಷೆಯ ಬೆಂಬಲದೊಂದಿಗೆ ಮೂಡಿಬಂದಿದೆ. ಉಷೆಯ ಬೆಳಕಿನಂತೆ ವಿಶಿಷ್ಟ ಪ್ರಕಾಶದಿಂದ ಕೂಡಿ ಸುಂದರವಾಗಿ ಬೆಳ್ಳಗೆ ಶುಭ್ರವರ್ಣದಿಂದ ಶೋಭಿಸುತ್ತಿದೆ. ಹೀಗೆ ಏಕರೂಪದ ಕನ್ನಡ ಮಾತನಾಡುವವರ ಕನ್ನಡ ರಾಜ್ಯವಾದ ಹಿನ್ನೆಲೆಯಲ್ಲಿ ಶತಶತಮಾನಗಳ ಇತಿಹಾಸ ಹೊಂದಿದ ಕನ್ನಡ ತಾಯಿ ಭುವನೇಶ್ವರಿಯನ್ನು ಕವಿ 'ಚಿರವೃದ್ಧೆ' ಎಂದು ಕರೆದಿದ್ದಾರೆ. ಅವಳನ್ನು ಸಂತೋಷದಿಂದ ಇದಿರುಗೊಳ್ಳುವ ಕನ್ನಡಿಗರ ಮನದ ಇಚ್ಛೆ ಶ್ರದ್ಧೆಯ ಉತ್ಸವ ರಾಜ್ಯೋದಯ ಸಂಭ್ರಮ. ಬೇಂದ್ರೆಯವರು 1957ರಲ್ಲಿ ಕನ್ನಡ ನಾಡು ಒಂದಾದುದನ್ನು 'ಗಾಳಿ ಬೀಸಿತೊ, ಗಾಳಿ ಬೀಸಿತು| ಹೂವು ಹಾಸಿಗೆ ಹಾಸಿತು' ಎಂದು ಆನಂದದಿಂದ ಬಣ್ಣಿಸಿದ್ದಾರೆ. ನಾಡಿನ ಭೂಕಕ್ಷೆಯ ವ್ಯಾಪ್ತಿಯನ್ನು ನುಡಿಯಲ್ಲಿ ಚಿತ್ರಿಸಿದ್ದಾರೆ. ಕನ್ನಡ ತಾಯಿಯು ಸಮೃದ್ಧವಾಗಿದ್ದು ಅವಳು ಯಾರನ್ನು ಬಿಡದೆ ಪೋಷಿಸುವಳು ಎಂಬುದನ್ನು 'ತೊರೆ'ಯ ಪ್ರತಿಮೆಯಲ್ಲಿ ಅನನ್ಯವಾಗಿ ಮನನವಾಗಿಸಿದ್ದಾರೆ.

ಗಾಳಿ ಬೀಸಿತೊ, ಗಾಳಿ ಬೀಸಿತು
ಹೂವು ಹಾಸಿಗೆ ಹಾಸಿತು,
ಕನ್ನಡದ ಈ ತುದಿಯ ತಡಸಲ–
ದಿಂದ ಜೋಗದ ಮಿಂಚಿಗೂ
ಬೆಳೆವ ಮೈಸೂರಂಚಿಗೂ
ಇದುವು ನಡುಗಿಸಲರಿಯದೋ
ಇದುವು ಉಡುಗಿಸಿಮೆರೆಯದೋ
ತೊರೆಯ ಬಿಡುವೊಲು ಹರಿದರೂ ಸೈ
ಯಾರನೂ ತಾ ತೊರೆಯದೋ (ಜೀವಲಹರಿ)

ಕರ್ನಾಟಕದ ಸುವರ್ಣ ಮಹೋತ್ಸವದ ಸಂಭ್ರಮವನ್ನು ಬೇಂದ್ರೆಯವರ ನೆನಪು ಹಾಗೂ ಅವರ ಕಾವ್ಯ ಮತ್ತಷ್ಟು ಹೆಚ್ಚಿಸುವುದು.

ಪ್ರತಿಕ್ರಿಯಿಸಿ: feedback@sudha.co.in